ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಮಾತನಾಡಿ...

ಶ್ರೀ ಬಿ.ಎಸ್. ಯಡಿಯೂರಪ್ಪ : ಇಂಥ ಧೋರಣೆಯನ್ನು ತಾಳಿ ಸರಕಾರ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಇಂಥ ಸರಕಾರವು ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ ....

ಉಪಾಧ್ಯಕ್ಷರು : ಸರಕಾರದ ಮತಿಯಿಂದ ಏನು ಉತ್ತರವನ್ನು ಕೊಡಬೇಕಾಗಿತ್ತು ಅದನ್ನು ಕೊಟ್ಟಿದ್ದಾರೆ. ಆದುದರಿಂದ ಮಾನ್ಯ ಸದಸ್ಯರುಗಳು ತಮ್ಮ ಆಸನಗಳಿಗೆ ಹೋಗಿ ಆಸೀನರಾಗಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಸದನದ ಸಮಿತಿಯನ್ನು ರಚನೆ ಮಾಡಲೇಬೇಕು...

ಶ್ರೀ ಬಿ.ಎಸ್. ಯಡಿಯೂರಪ್ಪ : ಕಲ್ಲು ಗಣಿಗುತ್ತಿಗೆದಾರರನ್ನು ಕಾಪಾಡುತ್ತಿರುವ ಸರಕಾರದ ನೀತಿ ಸರಿಯಲ್ಲ...

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಮಾನ್ಯ ಸದಸ್ಯರುಗಳು ಒಬ್ಬೊಬ್ಬರಾಗಿ ಮಾತನಾಡಬೇಕು..

ಶ್ರೀ ವಾಟಾಳ್ ನಾಗರಾಜ್ : ಸದನದ ಸಮಿತಿಯನ್ನು ಮಾಡುವವರಗೆ ಧರಣಿ ಹಿಂತೆಗೆದುಕೊಳ್ಳುವ ಪ್ರಶ್ನೆ ಇಲ್ಲ...

ಶ್ರೀ ಬಿ.ಎಸ್. ಯಡಿಯೂರಪ್ಪ : 1981ನೇ ಸಾಲಿನಿಂದ ಲೈಸನ್ಸ್ ಇಲ್ಲದೇ ಗ್ರಾನೈಟ್ ಲೂಟಿಯಾಗುತ್ತಿದ್ದು ಈಗ ಗ್ರಾನೈಟ್‌ನ್ನು ಲೂಟಿ ಮಾಡುವುದಕ್ಕೆ ಸರಕಾರದವರು ಲೈಸೆನ್ಸ್ ಕೊಡುತ್ತಿದ್ದಾರೆ.....

ಶ್ರೀ ವಾಟಾಳ್ ನಾಗರಾಜ್ : 1981 ರಿಂದಲೂ ಗ್ರಾನೈಟ್ ನಿರಂತವಾಗಿ ಲೂಟಿ ಯಾಗುತ್ತಿದೆ. 1981 ರಿಂದಲೂ ನಡೆದ ಅವ್ಯವಹಾರಗಳ ಬಗ್ಗೆ ತನಿಖೆಯಾಗಬೇಕು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರುಗಳು ಈ ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಸೂಕ್ತ ಅವಕಾಶಗಳು ಇದ್ದೇ ಇವೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಕಡೆ ಚರ್ಚೆ ಎಂದು ಹೇಳುತ್ತೀರಿ. ಮತ್ತೊಂದು ಕಡೆ ಲೂಟಿ ಮಾಡಲು ಲೈಸನ್ಸ್ ಕೊಡುತ್ತೀರಿ....

ಶ್ರೀ ಎಲ್.ಆರ್. ಶಿವರಾಮೇಗೌಡ : ಇವರು ಹೇಳುವುದು ಸರಿಯಲ್ಲ...

(ಮಾನ್ಯ ಸದಸ್ಯರಾದ ಶ್ರೀ ಎಲ್. ಆರ್. ಶಿವರಾಮೇಗೌಡರು ತಮ್ಮ ಆಸನಬಿಟ್ಟು ಬಂದು ಮಾತನಾಡಲಾರಂಭಿಸಿದರು)

ಉಪಾಧ್ಯಕ್ಷರು : ಶಿವರಾಮೇಗೌಡರೇ ತಮ್ಮ ಆಸನಕ್ಕೆ ಹೋಗಿ ಮಾತನಾಡಬೇಕು...

ಶ್ರೀ ವಾಟಾಳ್ ನಾಗರಾಜ್ : ಬೇಜವಾಬ್ದಾರಿ ಶಾಸಕ ಶಿವರಾಮೇಗೌಡರು ಅವರಿಗೆ ಜವಾಬ್ದಾರಿ ಇಲ್ಲ...

(ಗೊಂದಲ)

(ಶ್ರೀ ಎಲ್. ಆರ್. ಶಿವರಾಮೇಗೌಡರು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಮಧ್ಯೆ ಮಾತಿನ ಚಕಮಕಿ ಆಗುತ್ತಿತ್ತು ಮಾನ್ಯ ಶ್ರೀ ಶಿವರಾಮೇಗೌಡರು ಘೋಷಣೆ ಕೂಗುತ್ತಾ ಬಾವಿಯ ಹತ್ತಿರ ಧರಣಿ ಕುಳಿತರು)

(ಗೊಂದಲ)